ನನ್ನೊಂದಿಗೇ ಇರು. ನಾನು ನಿನ್ನೊಂದಿಗೇ ಬರುತ್ತಿದ್ದೇನೆ'

ಹೇಗಾದರೂ ಮಾಡಿ ಬಾಪೂ ಅವರ ದೃಷ್ಟಿ ತಮ್ಮ ಮೇಲೆ ಬೀಳಲೆಂದು ಸಾವಿರಾರು ಜನ ನೂಕು ನುಗ್ಗಲಿನಲ್ಲಿಯೇ ಮುಂದುವರೆದು ಬರುತ್ತಿದ್ದರು. ಹರಿಲಾಲ ಎಲ್ಲರನ್ನೂ ನೋಡುತ್ತಿದ್ದ. ಆ ಗುಂಪಿನಲ್ಲಿ ನಿಂತಿದ್ದ ಅನೇಕ ವ್ಯಕ್ತಿಗಳನ್ನು ಹರಿಲಾಲ ಗುರುತಿಸುತ್ತಿದ್ದ. ಎಲ್ಲರೂ ಬಾಪೂ ಅವರ ಮಗನಾದ ಹರಿಲಾಲನನ್ನು ವಿಶೇಷ ಭಾವನೆಯಿಂದ ನೋಡುತ್ತಿದ್ದರು. ಹರಿಲಾಲನಿಗೆ ಅಕಸ್ಮಾತ್ ಸಂಕೋಚ ಆವರಿಸಿತು.

ಹಾವಡಾ ಸ್ಟೇಷನ್‌ನಿಂದ ಕಾಂಗ್ರೆಸ್ ಹೌಸ್‌ವರೆಗಿನ ಮಾರ್ಗದಲ್ಲಿ ಜನಸಾಗರ ಉಕ್ಕಿ ಬಂದಿತ್ತು. ಮಾರ್ಗದುದ್ದಕ್ಕೂ ಹರಿಲಾಲ ಬಾಪೂ ಅವರೊಂದಿಗೇ ಕೂತಿದ್ದ. ಬಾಪೂ ಅವರಿಗೆ ಒಂದು ಕ್ಷಣ ಉಸಿರಾಡಲು ಸಹ ಪುರುಸೊತ್ತಿರಲಿಲ್ಲ. ನಡುರಾತ್ರಿಯವರೆಗೆ ಸಭೆಗಳು, ಸಲಹೆ ಸೂಚನೆಗಳು, ಗಣ್ಯಮಾನ್ಯರ ಭೇಟಿ, ಪತ್ರ ವ್ಯವಹಾರಗಳು, ಒಂದಲ್ಲ ಒಂದು ನಡೆಯುತ್ತಲೇ ಇದ್ದವು. ತಮ್ಮೆಲ್ಲವನ್ನೂ ಅರ್ಪಿಸುವ ಜನರಿಗೆ ಕೊನೆಯೇ ಇರಲಿಲ್ಲ. ಹರಿಲಾಲನಿಗೆ ಇಂದು, ಕಲ್ಕತ್ತಾದಲ್ಲಿ ಇಷ್ಟು ಜನ ಬಾಪೂ ಅವರಿಗೆ ಕೆಲಸವನ್ನು ಮಾಡುತ್ತಿದ್ದಾರೆ ಎಂಬ ವಿಷಯ ಮೊದಲ ಬಾರಿಗೆ ತಿಳಿಯಿತು.

ತಡ ರಾತ್ರಿ ಬಾಪೂ ಹರಿಲಾಲನೊಂದಿಗೆ ಅವನ ಪೋಲಕ್ ಸ್ಟ್ರೀಟ್‌ನಲ್ಲಿದ್ದ ಮನೆಗೆ ಮರಳಿ ಬಂದಾಗ ಅವರೊಂದಿಗೆ ಮಹಾದೇವ ದೇಸಾಯಿ ಮತ್ತು ಇನ್ನಿತರ ಮೂರ್ನಾಲ್ಕು ಜನರು ಸಹ ಇದ್ದರು. ಹರಿಲಾಲನ ಮನೆ ವಾಸ್ತವವಾಗಿಯೂ ಚಿಕ್ಕದಿತ್ತು. ಹೊಸದಾಗಿ ಮಾಡಿದ ವ್ಯವಸ್ಥೆಯನ್ನು ಬಾಪೂ ಗಮನಿಸಿದರು. ಅಕಸ್ಮಾತ್ ಅವರ ಕಣ್ಣುಗಳಲ್ಲಿ ದುಃಖ ಮೂಡಿಬಂತು.

ಅದೆಷ್ಟೋ ಗಂಟೆಗಳಿಂದ ಲುಪ್ತವಾಗಿದ್ದ ಭಾವನೆಗಳು ಮತ್ತೊಮ್ಮೆ ಮೂಡಿಬಂದವು. ಅವರು ಚುರುಕಾಗಿ ಸುತ್ತಮುತ್ತ ಗಮನಿಸಿದರು. ತನ್ನ ಹಿಂದಿನ ದುರಭ್ಯಾಸಗಳ ವಾಸನೆ ಬಾಪೂ ಅವರ ಮೂಗಿಗೆ ಬಡಿಯುತ್ತಿಲ್ಲ ತಾನೇ ಎಂದು ಒಂದು ಕ್ಷಣ ಹರಿಲಾಲ ಗಾಬರಿಗೊಂಡ. ಬಾಪೂ ಎದುರಿನ ಗೋಡೆಗೆ ಹಾಕಿದ್ದ ಗುಲಾಬಳ ಭಾವಚಿತ್ರವನ್ನು ನೋಡಿದರು. ನಂತರ ಹರಿಲಾಲನನ್ನು ನೋಡಿದರು. ಹರಿಲಾಲ ನೆಲವನ್ನು ನೋಡಿದ.

'ಹರಿ! ಹುಟ್ಟುಸಾವು ನಮ್ಮ ಕೈಯಲ್ಲಿಲ್ಲ' ಬಾಪೂ ಮೆಲ್ಲನೆ ಹೇಳಿದರು, 'ದೇವರು ನಮಗೆ ವಹಿಸಿರುವ ಕೆಲಸವನ್ನು ದೇವರ ಕೆಲಸವೆಂದೇ ತಿಳಿದು ಮಾಡಿದರೆ, ತನುಮನ ಪವಿತ್ರವಾಗಿರುತ್ತವೆ. ನಿನ್ನ ಪರಿಸ್ಥಿತಿಯನ್ನು ನೋಡಿದರೆ ಬಾ ಅವಳ ಪರಿಸ್ಥಿತಿ ಏನಾಗುವುದು ಎಂದು ಯೋಚಿಸು' ಹರಿಲಾಲ ಉತ್ತರಿಸಲಿಲ್ಲ.

'ನೀನು ಮಕ್ಕಳ ಬಗ್ಗೆ ಚಿಂತಿಸಬೇಡ. ಅವರು ರಾಜಕೋಟದಲ್ಲಿ ಬಲಿ ಬಹನಳೊಂದಿಗೆ ಚೆನ್ನಾಗಿದ್ದಾರೆ. ಆಗಾಗ ಆಶ್ರಮಕ್ಕೆ ಬಂದು ಬಾ ಬಳಿಯೂ ಇರುತ್ತಾರೆ. ತಾಯಿಯ ಕೊರತೆಯನ್ನು ಯಾರಿಂದ ನೀಗಲು ಸಾಧ್ಯ? ಆದರೆ ಕ್ರಮೇಣ ಎಲ್ಲವೂ ಅಭ್ಯಾಸವಾಗುತ್ತದೆ.'

'ಬಾಪೂ, ನನಗೆ ಮಕ್ಕಳ ಚಿಂತೆಯೇ ಕಾಡಿಸುತ್ತದೆ' ಹರಿಲಾಲ ಮೆಲ್ಲನೆ ಉಸುರಿದ, ಆದರೆ ಅವನ ಧ್ವನಿಯಲ್ಲಿದ್ದ ಟೊಳ್ಳು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಮರುದಿನದ ಕಾಂಗ್ರೆಸಿನ ಬಹಿರಂಗ ಅಧಿವೇಶನದಲ್ಲಿಯೂ ಹರಿಲಾಲ ಬಾಪೂ ಅವರೊಂದಿಗೆ ಹೋದ. ಪೆಂಡಾಲಿನಲ್ಲಿ ಎಳ್ಳಷ್ಟೂ ಜಾಗವಿರಲಿಲ್ಲ. ಇಡೀ ಕಲ್ಕತ್ತ ನಗರವೇ ಅಲ್ಲಿ ಉಕ್ಕಿ ಬಂದಿತ್ತು.

ಪೆಂಡಾಲಿನ ಹೊರಗೆ ಬಂದೂಕುಧಾರಿ ಪೊಲೀಸರ ಗುಂಪುಗಳು ನಿಂತಿದ್ದವು. ಬ್ರಿಟಿಷ್ ಸಾರ್ಜೆಂಟರೂ ಸಹ ದರ್ಪದಿಂದ ಅತ್ತಇತ್ತ ಹೆಜ್ಜೆಗಳನ್ನು ಹಾಕುತ್ತಾ ಸುತ್ತಾಡುತ್ತಿದ್ದರು. ಇವನ್ನೆಲ್ಲಾ ಸ್ವಲ್ಪವೂ ಲೆಕ್ಕಿಸದೆ ಒಳಗೆ ಬಾಪೂ ಅವರ ಮಾತುಗಳು ಪ್ರತಿಧ್ವನಿಸುತ್ತಿದ್ದವು.

'...ನಾವಿಲ್ಲಿ ನಮ್ಮ ನ್ಯಾಯವನ್ನು ಯಾಚಿಸಲು ಸೇರಿದ್ದೇವೆ. ನಾವು ಅತ್ಯಾಚಾರ, ದಬ್ಬಾಳಿಕೆ ಮತ್ತು ಅನ್ಯಾಯದ ಬಗ್ಗೆ ಅಸಹಕಾರ ಚಳವಳಿಯನ್ನು ಮಾಡಬೇಕು. ಯಾರೂ ಚಪ್ಪಾಳೆಗಳನ್ನು ತಟ್ಟಬಾರದು, ಗದ್ದಲವನ್ನೂ ಮಾಡಬಾರದು. ಪಂಜಾಬಿನ ಮೇಲೆ ಅತ್ಯಾಚಾರವನ್ನೆಸಲಾಗಿದೆ. ಮುಸಲ್ಮಾನ್ ಸಹೋದರರ ಮೇಲೂ ಅತ್ಯಾಚಾರವನ್ನೆಸಗಲಾಗಿದೆ. ನಾವು ನಮ್ಮ ಸಿಟ್ಟನ್ನು ಮಾತ್ರ ಪ್ರದರ್ಶಿಸಿ ಕೂರಬಾರದು. ನಾವೆಲ್ಲರೂ ಈ ಸಿಟ್ಟನ್ನು ಅಸಹಕಾರದಿಂದ ಪ್ರದರ್ಶಿಸಬೇಕು. ಒಂದು ವೇಳೆ ನಾವೆಲ್ಲರೂ ಒಂದಾಗಿ ಈ ದಬ್ಬಾಳಿಕೆಯನ್ನು ಹಿಮ್ಮೆಟ್ಟಿಸಿದರೆ, ನಾವು ಇನ್ನು ಒಂದೇ ವರ್ಷದಲ್ಲಿ ಸ್ವಾತಂತ್ರ್ಯವನ್ನು ಪಡೆಯುತ್ತೇವೆ ಎಂಬ ಪೂರ್ಣ ವಿಶ್ವಾಸ ನನಗಿದೆ. ಅಗತ್ಯಬಿದ್ದರೆ ಸ್ವಾರ್ಥವನ್ನು ತ್ಯಜಿಸುವ ಜನರ...'

ಜನ ಸಮೂಹ 'ಮಹಾತ್ಮಾ ಗಾಂಧಿಯವರಿಗೆ ಜಯವಾಗಲಿ' ಎಂದು ಪ್ರಚಂಡ ಜಯಕಾರವನ್ನು ಹಾಕಿತು.

'...ನನ್ನ ಮನಸ್ಸಿನಲ್ಲಿ ಹಿಂದೂ ಮುಸ್ಲಿಮ್‌ರ ಒಗ್ಗಟ್ಟಿಗೆ ಹೆಚ್ಚು ಮಹತ್ವವಿದೆ' ಬಾಪೂ ಸ್ವಲ್ಪವೂ ವಿಚಲಿತರಾಗದೆ ನಿರಂತರವಾಗಿ ಮಾತನಾಡುತ್ತಿದ್ದರು . ಅಪಾರ ಜಲರಾಶಿಯ ಅಲೆಗಳಂತೆ ಗುಂಪು ಒಂದೇ ಸಮನೆ ಹೆಚ್ಚುತ್ತಿತ್ತು.

ಬಾಪೂ ಅವರ ಒಂದೊಂದು ಶಬ್ದಕ್ಕೂ ಚಪ್ಪಾಳೆಯನ್ನು ತಟ್ಟಲಾಗುತ್ತಿತ್ತು. ಜೀವ ತೊರೆದು ಹೋರಾಡುವವರು ಸ್ಪರ್ಧೆಯಲ್ಲಿ ತೊಡಗಿರುವಂತೆ ತೋರುತ್ತಿತ್ತು. ಹರಿಲಾಲ ಎಲ್ಲವನ್ನೂ ಎವೆಯಿಕ್ಕದೆ ಗಮನಿಸುತ್ತಿದ್ದ. ಅವನ ಮನಸ್ಸಿನಲ್ಲೂ ಕೋಲಾಹಲ ಎದ್ದಿತ್ತು. ಇಷ್ಟು ಸಂಖ್ಯೆಯ ಜನ ತಮ್ಮ ಜೀವವನ್ನು ಪಣವಾಗಿಟ್ಟು ಹೋರಾಡಲು ಕಾತುರರಾಗಿದ್ದರು. ಇವರೆಲ್ಲರ ನಡುವೆ ನಾನೆಲ್ಲಿದ್ದೇನೆ ಎಂದು ಹರಿಲಾಲ ಯೋಚಿಸಿದ.

'ನಿಮ್ಮಲ್ಲಿ ಒಬ್ಬನಾದರೂ ಸಹ ಸ್ವಾರ್ಥವನ್ನು ತ್ಯಜಿಸಲು ಸಿದ್ಧನಾದರೆ, ಅವನನ್ನು ಒಪ್ಪಿಕೊಳ್ಳಿ. ಹೀಗಾಗದಿದ್ದರೆ ನನ್ನ ಮಾತನ್ನು ನಿಶ್ಚಿತವಾಗಿ, ದೃಢತೆಯಿಂದ ತಿರಸ್ಕರಿಸಿ. ನಾವೆಲ್ಲರೂ ಸಂಯಮ ಮತ್ತು ನಿಗ್ರಹದ ಹಾದಿಯಲ್ಲಿ ಸಾಗಬೇಕು ಎಂಬುದು ನನ್ನ ಪ್ರಾರ್ಥನೆಯಾಗಿದೆ'

ಬಾಪೂ ಅವರು ತಮ್ಮ ಮಾತನ್ನು ಪೂರೈಸಿದರು. ಮತ್ತೊಮ್ಮೆ 'ಮಹಾತ್ಮಾ ಗಾಂಧಿಯವರಿಗೆ ಜಯವಾಗಲಿ' ಎಂಬ ಘೋಷಣೆಗಳಿಂದ ಆಗಸ ಪ್ರತಿಧ್ವನಿಸಿತು. ಅದೆಷ್ಟೋ ಹೊತ್ತು ಚಪ್ಪಾಳೆಯ ಧ್ವನಿ ಕೇಳಿಸುತ್ತಿತ್ತು. ಜನ ವೇದಿಕೆಯತ್ತ ಸಾಗಿದರು. ಬಾಪೂ ಮತ್ತು ಇನ್ನಿತರ ಮುಖಂಡರು ನಾಲ್ಕೂ ಕಡೆಯಿಂದ ಸುತ್ತುವರೆಯಲ್ಪಟ್ಟರು.

'ನಾವು ಜೈಲನ್ನು ತುಂಬುತ್ತೇವೆ. ನಾವು ಸ್ವಾತಂತ್ರ್ಯವನ್ನು ಪಡೆದೇ ತೀರುತ್ತೇವೆ. ಈಗ ಸ್ವಾತಂತ್ರ್ಯದ ಕೆಚ್ಚು ನಮ್ಮ ಹೃದಯದಲ್ಲಿದೆ. ನಮ್ಮ ಪ್ರಾಣ ಹೋದರೆ ಹೋಗಲಿ...' ನಾನಾ ರೀತಿಯ ಘೋಷಣೆಗಳು ಮೊಳಗಿದವು. ಸಾಯಲು ಪ್ರತಿಯೊಬ್ಬರೂ ಇನ್ನೊಬ್ಬರಿಗಿಂತ ಮುಂದೆ ಬರುತ್ತಿದ್ದರು. ಮಹಿಳೆಯರು, ಪುರುಷರು, ವೃದ್ಧರು, ಮಕ್ಕಳು ಅಲ್ಲದೆ ಅಂಗವಿಕರಲರೂ ಸಹ ಮುಂದೆ ಬರುವುದನ್ನು ನೋಡಿ ಹರಿಲಾಲ ಬೆಕ್ಕಸ ಬೆರಗಾದ. ಅವನ ಕಣ್ಣುಗಳೆದುರು ಆಫ್ರಿಕಾದ ಹೋರಾಟದ ದೃಶ್ಯಗಳು ಸುಳಿದವು. ಫೀನಿಕ್ಸ್ ಆಶ್ರಮದಿಂದ ಸತ್ಯಾಗ್ರಹಿಗಳ ಸಣ್ಣ ಗುಂಪಿನ ಮುಂದೆ ಹೊರಟ ಉದ್ದ ಮೀಸೆಗಳ ಆ ಹರಿಲಾಲನನ್ನು ಈಗ ಸ್ವತಃ ಹರಿಲಾಲ ನೋಡುತ್ತಿದ್ದ!

'ಹರಿಲಾಲ, ಈ ದಬ್ಬಾಳಿಕೆನ್ನು ಎದುರಿಸಲೇ ಬೇಕು' ಮುಸ್ಲಿಮ್ ಸ್ನೇಹಿತನೊಬ್ಬ ಹರಿಲಾಲನ ಅಂಗೈಯನ್ನು ಬಿಗಿಯಾಗಿ ಹಿಡಿದ. 'ಮೀಯಾ, ಎದುರಿಸಲೇ ಬೇಕು, ಎದುರಿಸಲೇ ಬೇಕು' ಹರಿಲಾಲ ಗಟ್ಟಿಯಾಗಿ ಕೂಗಿದ.

ಮರುದಿನವೇ ಬಾಪೂ ಅವರು ತಮ್ಮ ಪ್ರವಾಸದ ಮುಂದಿನ ಸ್ಥಳಕ್ಕೆ ಹೋಗಲು ಕಲ್ಕತ್ತಾ ತ್ಯಜಿಸಿ ಅಸ್ಸಾಮಿನತ್ತ ಪ್ರಯಾಣವನ್ನು ಬೆಳೆಸಿದರು. ಆದರೆ ಹರಿಲಾಲ ಅಂದೇ ಕಾಂಗ್ರೆಸ್ ಹೌಸ್‌ಗೆ ಹೋಗಿ ಅಸಹಕಾರ ಚಳವಳಿಯ ಆರಂಭಿಕ ಗುಂಪಿನಲ್ಲಿ ತನ್ನ ಹೆಸರನ್ನು ಬರೆಸಿದ. ಅಲ್ಲದೆ ಆ ಮುಸ್ಲಿಮ್ ಸ್ನೇಹಿತ ಹರಿಲಾಲನಿಗೆ ಖಿಲಾಫತ್ ಹೋರಾಟದಲ್ಲಿ ಸೇರಿಕೊಳ್ಳುವಂತೆ ಆಹ್ವಾನವನ್ನು ನೀಡಿದ.

ಹರಿಲಾಲ ತಾನು ಮುಸಲ್ಮಾನರ ಹೋರಾಟದಲ್ಲಿ ಸೇರಿಕೊಳ್ಳಲು ಸಿದ್ಧನಿದ್ದೇನೆ ಎಂದು ಘೋಷಣೆಯನ್ನೂ ಮಾಡಿದ. ಗಾಂಧೀಜಿಯವರಂತೆ ಅವರ ಮಗ ಸಹ ಖಿಲಾಫತ್ ಹೋರಾಟದಲ್ಲಿ ನಮ್ಮೊಂದಿಗಿದ್ದಾನೆ ಎಂಬುದನ್ನು ತಿಳಿದ ಮುಸಲ್ಮಾನರು ಹರಿಲಾಲನನ್ನು ಉತ್ಸಾಹದಿಂದ ಸುತ್ತುವರೆದರು. ಅನೇಕ ದಿನಗಳಿಂದ ಒಂಟಿತನದಲ್ಲಿ ಜೀವಿಸುತ್ತಿದ್ದ ಹರಿಲಾಲನಿಗೆ ಇದು ಹಿತವೆನಿಸಿತು. ಅವನು ಖಾದಿ ಭಂಡಾರಕ್ಕೆ ಹೋಗಿ ತನಗಾಗಿ ಖಾದಿ ಬಟ್ಟೆಗಳನ್ನು ಖರೀದಿಸಿದ, ತಲೆಗೆ ಖಾದಿ ಟೋಪಿಯನ್ನೂ ಹಾಕಿಕೊಂಡ. ಅಸಹಕಾರ ಚಳವಳಿಯಲ್ಲಿ ಭಾಗವಹಿಸಲು ಸಿದ್ಧನಾಗಿದ್ದ ಹರಿಲಾಲನ್ನು ನೋಡಿ ಜನರು ಆನಂದದಿಂದ ಕುಣಿದು ಕುಪ್ಪಳಿಸಿದರು.

(ಸಶೇಷ)